ದಿನ ಲಕ್ಷ್ಮಿ ನನ್ನ ತಂಗಿ ಅಂತ ಅವನೇ ಹೇಳಿದ್ದ. ಈಗ ಪೆಳ್ಳಾಂ ಅನ್ನುತ್ತಿದ್ದಾನಲ್ಲ ಅನ್ನಿಸಿ ಸಿಟ್ಟು ಬಂತು.

ಇರೋ ವಿಚಾರ ಹೇಳಬಹುದಿತ್ತು. ಹೆಂಡತಿಯನ್ನು ತಂಗಿ ಅಂತ ಹೇಳಿಕೊಳ್ಳೋದಕ್ಕೆ ಏನೋ ಬಲವಾದ ಕಾರಣ ಇರಬಹುದು ಅನ್ನಿಸಿದರೂ ಸಾಯಿಲಕ್ಷ್ಮಿ ಮುತ್ಯಾಲನ ಹೆಂಡತಿಯೋ, ತಂಗಿಯೋ ಎನ್ನುವ ಗೊಂದಲ ಹೆಚ್ಚಾಯಿತು. ಪೆದ್ದಾಯನನಿಗೆ ಫೋನ್ ಮಾಡಿ ಈ ವಿಷಯ ತಿಳಿಸಬೇಕು. ನಾವು ಇನ್ನೆಷ್ಟು ದಿನ ಇಲ್ಲಿರಬೇಕು ಅನ್ನೋದನ್ನಾದರೂ ಹೇಳಿಬಿಡಿ ಅಂತ ಕೇಳಬೇಕು ಅಂದುಕೊಂಡ.

ಮರುದಿನ ಬೆಳಿಗ್ಗೆ ಇದ್ದಕ್ಕಿದ್ದಂತೆ ಪೋತರಾಜು ಬಂದ. ಮಾ ನಾನ್ನಕು ಒಂಟ್ಲಲ್ಲೊ ಬಾಗಲೇದಂಟ ಅನ್ನುತ್ತ ತಲೆ ಕೆರೆಯ ತೊಡಗಿದ. ಅವನು ಹಣಕ್ಕಾಗಿ ಬಂದಿದ್ದಾನೆ ಅನ್ನೋದು ವೆಂಕಟಗಿರಿ ಅರ್ಥವಾಯಿತು. ಐನೂರು ರೂಪಾಯಿ ಕೊಟ್ಟು ಬೇಗ ಬಂದು ಬಿಡು ಎಂದಷ್ಟೇ ಹೇಳಿ ಅವನನ್ನು ಸಾಗಹಾಕಿದ...

★★★

ಕೊಂಡಯ್ಯ, ಬಾಲಗೋವಿಂದರಿಗೆ ಇನ್ನು ಕಾಯುತ್ತ ಕೂರುವುದು ಸಾಧ್ಯವಿಲ್ಲ ಅನ್ನಿಸಿತು ವೆಂಕಟಗಿರಿಗೆ. ಪೆದ್ದಾಯನನಿಗೆ ಫೋನ್ ಮಾಡಿ ವಿಚಾರಿಸೋಣವೇ ಅಂತ ಮೂರು ದಿನ ಯೋಚನೆ ಮಾಡಿ ತಲೆ ಕೆಟ್ಟು ಹೋಯಿತು. ಕೆಲಸ ಇಲ್ಲದೆ ಕಾಯುತ್ತ ಕೂರುವ ಬದಲು ಎಲ್ಲವನ್ನೂ ಬಿಟ್ಟು ಎಲ್ಲಿಗಾದರೋ ಓಡಿ ಹೋಗಬೇಕು ಅನ್ನಿಸುತ್ತಿತ್ತು.

> ಗಡಿ ದಾಟಿದ ಮೇಲೆ ಬಸ್‌ಗಳನ್ನು ನಿಲ್ಲಿಸಿ ಚೆಕ್ ಮಾಡಿದರೆ? ಪೆಟ್ಟಿಗೆಗಳಲ್ಲಿ ಏನಿದೆ ಅಂತ ಒಡೆದು ನೋಡಿದರೆ? ಪೆಟ್ಟಿಗೆಗಳ ಜತೆಗೆ ಅಯ್ಯಗಾರು ಸಹ ಪೊಲೀಸರಿಗೆ ಸಿಕ್ಕಿಬೀಳ್ತಾರೆ ಅಂತ ಅನ್ನಿಸಿತು.

ಲಕ್ಷ್ಮಿ ಮೂರು ದಿನಗಳಿಂದ ಒಂದೇ ಸಮನೆ ವಾಂತಿ ಮಾಡಿಕೊಳ್ಳುತ್ತಿದ್ದಾಳೆ ಅಂತ ಮುತ್ಯಾಲ, ವೆಂಕಟಗಿರಿ ಎದುರು ಹೇಳಿಕೊಂಡು ಪೇಚಾಡಿದ. ಕೊನೆಗೆ ಆಟೊದಲ್ಲಿ ಅವಳನ್ನು ಕೂರಿಸಿಕೊಂಡು ಗೌಸಿಯಾ ಆಸ್ಪತ್ರೆಗೂ ಹೋಗಿ ಬಂದ. ಬಂದವನೇ ಲಕ್ಷ್ಮಿ ಗರ್ಭಿಣಿ ಅಂತೆ. ಲೇಡಿ ಡಾಕ್ಟರು ಹೇಳಿದರು. ನಮ್ಮ ಭಾವನಿಗೆ ಫೋನ್ ಮಾಡಿದ್ದೆ. ಮುಂದಿನ ವಾರ ಅವರೇ ಬಂದು ಲಕ್ಷ್ಮಿಯನ್ನು ಕರಕೊಂಡು ಹೋಗ್ತಾರಂತೆ. ಇಲ್ಲವಾದರೆ ಯಾರನ್ನಾದರೂ ಅವಳ ಸಹಾಯಕ್ಕೆ ಕಳಿಸ್ತಾರಂತೆ ಅಂತ ವೆಂಕಟಗಿರಿಯ ಮುಖ ನೋಡದೆ ಹೇಳಿದ.

ಈ ವಿಷಯವನ್ನು ಪೆದ್ದಾಯನನಿಗೆ ತಿಳಿಸುವುದೇ ಸರಿ ಅಂತ ವೆಂಕಟಗಿರಿ ನಿರ್ಧರಿಸಿದ. ಪಬ್ಲಿಕ್ ಬೂತ್‌ಗೆ ಹೋಗಿ ಫೋನ್ ಮಾಡಿದ. ಆ ಕಡೆಯಿಂದ ಫೋನ್ ಎತ್ತಿಕೊಂಡವನು ಪೆದ್ದಾಯನ ಕರ್ನೂಲಿಕಿ ವೆಳ್ಳಾರು ಎಂದಷ್ಟೇ ಹೇಳಿ ಫೋನ್ ಕಟ್ ಮಾಡಿದ. ಪೆದ್ದಾಯನನ ಪ್ಲಾನು ಏನು ಎನ್ನುವುದು ಗೊತ್ತಾಗದೆ ಚಡಪಡಿಸಿದ. ಕಡಪಾಕ್ಕೆ ಹೋಗಿ ಪೆದ್ದಾಯನನ್ನು ಮುಖತಃ ಕಂಡು ಮಾತಾಡಿಕೊಂಡು ಬರೋಣವೇ ಅಂತ ಯೋಚಿಸುತ್ತಲೇ ಒಂದು ದಿನ ಕಳೆದ.

ಬೆಳಕು ಹರಿಯುವ ಹೊತ್ತಿಗೆ ಒಂದು ಆಟೊ ಮನೆಯ ಮುಂದೆ ಬಂದು ನಿಂತಿತು. ಹೊರಗೆ ಮಲಗಿದ್ದ ವೆಂಕಟಗಿರಿ ಮನೆ ಓನರ್ ಬಂದಿರಬಹುದೆಂದು ಎದ್ದು ಕೂತ. ಆಟೊ ಡ್ರೈವರ್ ಗೇಟು ತೆಗೆದು ವೆಂಕಟಗಿರಿ ಬಳಿಗೆ ಬಂದು, ನಾ ಪೇರು ಬಾಲಗೋವಿಂದ ಎನ್ನುತ್ತ ಅವನ ಪ್ರತಿಕ್ರಿಯೆಗೆ ಕಾದ.

ರಾಪ್ಪಾ ನಾಯನ, ನೇನೇ ವೆಂಕಟಗಿರಿ ಎನ್ನುತ್ತ ಎದ್ದು ನಿಂತ. ಬಾಲಗೋವಿಂದ ಹೆಚ್ಚು ಮಾತಾಡಲಿಲ್ಲ. ಜೇಬಿನಿಂದ ಐವತ್ತು ಸಾವಿರ ರೂಪಾಯಿ ತೆಗೆದು ವೆಂಕಟಗಿರಿಗೆ ಕೊಟ್ಟ. ಮನೆಯ ಬಾಗಿಲು ಬಡಿದು ಮುತ್ಯಾಲ, ಲಕ್ಷ್ಮಿಯರನ್ನೂ ಎಬ್ಬಿಸಿದ.